2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ
ಸಿ.ಸಿ.ನಂ. 644/2019

ಹೆಸರು ಃ ಉಮಾಶಂಕರ್
ತಂದೆ ಹೆಸರು ಃ ಕೃಷ್ಣಪ್ಪ
ವಯಸ್ಸು ಃ 54
ಉದ್ಯೋಗ ಃ ವ್ಯಾಪಾರ
ವಾಸ ಃ ವಿಜಯಪುರ

ಪಿಡಬ್ಲ್ಯೂ:2 ಸಿಡಬ್ಲ್ಯೂ ಃ1
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 16-06-2026

**ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ**

ಮೃತ ಜಯಮ್ಮ ನನ್ನ ತಾಯಿ. ಚಾಸಾ 2 ನನ್ನ ತಂದೆ. ದಿ. 12.12.2018 ರಂದು ನಾನು ಅಂಗಡಿಯಲ್ಲಿದ್ದಾಗ, ಸಂಜೆ 05.30 ಗಂಟೆ ಸಮಯದಲ್ಲಿ ಚಾಸಾ 3 ರವರು ನನಗೆ ಕರೆ ಮಾಡಿ, ನನ್ನ ತಂದೆ ತಾಯಿಗೆ ದೇವನಹಳ್ಳಿ-ಕೋಲಾರ ರಸ್ತೆಯ ವಿಜಯಪುರ ಬೈಪಾಸ್ ಬಳಿ ಶನಿಮಹಾತ್ಮ ದೇವಸ್ಥಾನದ ಬಳಿ ಅಪಘಾತವಾಗಿದೆ ಎಂದು ತಿಳಿಸಿದರು. ಕೂಡಲೇ ನಾನು ಅಪಘಾತ ಸ್ಥಳಕ್ಕೆ ಹೋದೆ. ಅಲ್ಲಿ ನನ್ನ ತಂದೆ-ತಾಯಿ ರಸ್ತೆ ಮೇಲೆ ಬಿದ್ದಿದ್ದರು. ನನ್ನ ತಾಯಿಯ ತಲೆ ಮತ್ತು ಕಾಲಿಗೆ ತೀವ್ರತರವಾದ ಪೆಟ್ಟಾಗಿತ್ತು. ನನ್ನ ತಂದೆಗೆ ಕೈ ಮತ್ತು ಕಾಲಿಗೆ ಪೆಟ್ಟಾಗಿತ್ತು. ಅಂಬ್ಯುಲೆನ್ಸ ಮೂಲಕ ಇಬ್ಬರನ್ನು ವಿಜಯಪುರ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಅಲ್ಲಿ ವೈದ್ಯರು ಪರೀಕ್ಷಿಸಿ ನನ್ನ ತಾಯಿ ಮೃತ ಪಟ್ಟಿದ್ದಾರೆ ಎಂದು ತಿಳಿಸಿದರು. ಅಪಘಾತದ ಬಗ್ಗೆ ನನ್ನ ತಂದೆಯನ್ನು ವಿಚಾರ ಮಾಡಲಾಗಿ, ನನ್ನ ತಂದೆ ತಾಯಿ ಜಮೀನಿನ ಬಳಿ ಹೋಗಿ ಕೆಎ 43-ಆರ್-7051 ಜೂಪಿಟರ್ ವಾಹನದಲ್ಲಿ ವಾಪಸ್ಸು ಮನೆಗೆ ಬರುತ್ತಿರುವಾಗ, ಕೋಲಾರದ ರಸ್ತೆಯಲ್ಲಿ, ಇಂಡಿಕೆಟರ್ ಹಾಕಿ ಕೊಂಡು, ಕೈ ತೋರಿಸಿ, ರಸ್ತೆಯ ಬಲಕ್ಕೆ ತಿರುಗುತ್ತಿದ್ದಾಗ, ಹಿಂಭಾಗದಿಂದ ಕೆಎ 43-ಎಲ್-1911 ಕಪ್ಪು ಬಣ್ಣದ ದ್ವಿಚಕ್ರ ವಾಹನದ ಚಾಲಕ ಅತಿ ವೇಗವಾಗಿ ಬಂದು ತಮ್ಮ ವಾಹನದ ಹಿಂಭಾಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿತು ಎಂದು ತಿಳಿಸಿದರು. ವಿಚಾರ ತಿಳಿದು ನಾನು ಈ ಬಗ್ಗೆ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದೂರು ನೀಡಿದ ಮರುದಿನ ಪೋಲಿಸ್ ರು ಮಹಜರ್ ಗೆ ಸಹಕರಿಸಬೇಕೆಂದು ಕೋರಿಕೊಂಡಿದ್ದು, ನಾನು ಕೋರಿಕೆಯ ಮೇರೆಗೆ ಅಪಘಾತ ಸ್ಥಳಕ್ಕೆ ಹೋಗಿ, ನಾನು ಅಪಘಾತ ಸ್ಥಳ ತೋರಿಸಿದ್ದು, ಆ ಸ್ಥಳದಲ್ಲಿ ಚಾಸಾ 4 ಮತ್ತು 5 ರ ಸಮಕ್ಷಮ ಮಹಜರ್ ಮಾಡಿದರು. ಮಹಜರ್ ಸಮಯದಲ್ಲಿ ನಾನು ಗುರುತಿಸಿದ ವಾಹನಗಳನ್ನು ಸ್ಥಳದಿಂದ ಅಮಾನತ್ತು ಪಡಿಸಿಕೊಂಡರು. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿರುವ ಕಪ್ಪು ಬಣ್ಣದ ವಾಹನದ ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿರುವ ಕೆಂಪು ಬಣ್ಣದ ವಾಹನದ ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-೬ ಮತ್ತು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-4 ರಿಂದ 7 ರಲ್ಲಿ ಕಂಡಿರುವ ವಾಹನವನ್ನು ಪೋಲಿಸ್ ರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಅಪಘಾತ ಆದ ನಂತರ ನಾನು ಸ್ಥಳಕ್ಕೆ ಹೋದಾಗ ಅಪಘಾತ ಪಡಿಸಿದ ವಾಹನದ ಚಾಲಕ ಸ್ಥಳದಲ್ಲಿಯೇ ಇದ್ದು ನಾನು ಆತನನ್ನು ನೋಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ, ತಾನು ಸ್ಥಳದಲ್ಲಿ ನೋಡಿದ ಅಪಘಾತ ಪಡಿಸಿದ ವಾಹನದ ಚಾಲಕ ಎಂದು ಗುರುತಿಸಿರುತ್ತಾರೆ.

**ಪಾಟಿ ಸವಾಲು ಆರೋಪಿ ಪರ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಚಾಸಾ 2 ರವರಿಗೆ ಈ ಅಪಘಾತ ಆದ ಸಮಯದಲ್ಲಿ 65 ವರ್ಷ ಆಗಿತ್ತು ಎಂದರೇ ಸರಿ. ಆ ಸಮಯದಲ್ಲಿ ಅವರಿಗೆ ವಾಹನಾ ಚಾಲನಾ ಪರವಾನಿಗೆ ಇರಲಿಲ್ಲ ಎಂದರೇ ಸರಿಯಲ್ಲ, ಇತ್ತು ತಮ್ಮ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ, ನಂತರ ಕಳೆದುಹೋಗಿದೆ. 65 ವರ್ಷ ವಯಸ್ಕರರಿಗೆ ಚಾಲನಾ ಪರವಾನಿಗೆ ನೀಡುವುದಿಲ್ಲ ಎಂದರೇ ಚಾಸಾ 2 ರವರ ಬಳಿ ಮುಂಚಿನಿಂದಲೂ ಚಾಲನಾ ಪರವಾನಿಗೆ ಇತ್ತು. ಚಾಸಾ 3 ನನ್ನ ಸ್ನೇಹಿತರು. ಅಪಘಾತ ಆದ ಸಮಯದಲ್ಲಿ ನಾನು ವಿಜಯಪುರ ಟೌನ್ ನಲ್ಲಿ ಇದ್ದೇ. ನಾನು ಇದ್ದ ಸ್ಥಳಕ್ಕೂ ಅಪಘಾತ ಸ್ಥಳಕ್ಕೂ ಅರ್ಧ ಕಿಲೋ ಮೀಟರ್ ಅಂತರ ಇದೆ. ಅಪಘಾತದ ವಿಚಾರ ನನಗೆ ಚಾಸಾ 3 ರವರಿಂದ ತಿಳಿದಿರುತ್ತದೆ. ನಾನು ಖುದ್ದು ಅಪಘಾತ ನೋಡಿಲ್ಲ. ನಾನು ಅಪಘಾತ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ನನ್ನ ತಂದೆ- ತಾಯಿಯನ್ನು ಅಂಬ್ಯುಲೆನ್ಸ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು ಎಂದರೇ ಸರಿಯಲ್ಲ. ನಾನು ಅಂಬ್ಯುಲೆನ್ಸ ನಲ್ಲಿ ಖುದ್ದು ಹೋಗಿಲ್ಲ ಎಂದರೇ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ತಂದೆ-ತಾಯಿ ಹೆಲ್ಮೆಟ್ ಧರಿಸಿರಲಿಲ್ಲ ಎಂದರೇ ಸರಿಯಲ್ಲ. ಚಾಸಾ 2 ರವರಿಗೆ 65 ವರ್ಷ ಆಗಿದ್ದರಿಂದ ಅವರಿಗೆ ವಾಹನ ಚಾಲನೆ ಮಾಡಲು ಶಕ್ತಿ ಇರಲಿಲ್ಲ ಎಂದರೇ ಸರಿಯಲ್ಲ, ಅವರು ಗಟ್ಟಿಯಾಗಿದ್ದರು. ಅಪಘಾತ ಆದ ನಂತರ ಚಾಸಾ 2 ರವರಿಗೆ ಪ್ರಜ್ಞೆ

ಇರಲಿಲ್ಲ ಎಂದರೇ ಸರಿಯಲ್ಲ, ಅವರೂ ಚೆನ್ನಾಗಿ ಇದ್ದರು, ಅವರೇ ಅಪಘಾತದ ಬಗ್ಗೆ ನನಗೆ ತಿಳಿಸಿರುತ್ತಾರೆ. ಚಾಸಾ 2 ಎಷ್ಟು ಕಿಲೋ ಮೀಟರ್ ವೇಗದಲ್ಲಿ ವಾಹನ ಚಾಲನೆ ಮಾಡುತ್ತಿದ್ದರು ಎಂದರೇ, ಅವರೂ ಸಾಮಾನ್ಯವಾಗಿ ಗಂಟೆಗೆ 30 ಕಿಲೋ ಮೀಟರ್ ವೇಗದಲ್ಲಿ ಚಾಲನೆ ಮಾಡುತ್ತಿದ್ದರು. ಚಾಸಾ 2 ಅಪಘಾತ ದ ಸಮಯದಲ್ಲಿ ಗಂಟೆಗೆ 30 ಕಿಲೋ ಮೀಟರ್ ವೇಗದಲ್ಲಿ ಚಾಲನೆ ಮಾಡುತ್ತಿದ್ದನ್ನು ನಾನು ನೋಡಿಲ್ಲ ಎಂದರೇ ಸರಿ. ಅಪಘಾತ ಹೇಗೆ ಆಯಿತು ಎಂಬುವುದರ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೇ ಸರಿ. ನಾನು ಅಪಘಾತ ಸ್ಥಳದಲ್ಲಿ ನನ್ನ ತಾಯಿಯನ್ನು ನೋಡಿದಾಗ ಅವರಿಗೆ ಇನ್ನು ಜೀವ ಇತ್ತು. ಯಾವ ವಾಹನದಿಂದ ಅಪಘಾತ ಆಯಿತು ಎಂಬುವುದರ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೇ ಸರಿ.

ನಿಪಿ-2 ನ್ನು ಸ್ಟಾಂಪ್ ವೆಂಡರ್ ಕೇಶವ ನಾರಾಯಣ ರವರ ಸಹಾಯಕ ಬರೆದಿರುತ್ತಾರೆ. ನಿಪಿ-2 ನ್ನು ಯಾರು ಬರೆದರೂ ಎಂಬ ಬಗ್ಗೆ ಪೋಲಿಸ್ ರಿಗೆ ನಾನು ತಿಳಿಸಿಲ್ಲ. ನಾನು ನಿಪಿ-2 ರಲ್ಲಿರುವ ವಿಚಾರ ತಿಳಿದುಕೊಂಡು ಪೋಲಿಸ್ ರಿಗೆ ನೀಡಿರುತ್ತೇನೆ. ನನಗೆ ಓದಲು ಬರದ ಕಾರಣ ನಿಪಿ-2 ನ್ನು ನನಗೆ ಓದಲಾಗುವುದಿಲ್ಲ ಎಂದರೇ ಸರಿ. ನಾನು ಅಪಘಾತದ ದಿನ ಸಂಜೆ 07.30 ಗಂಟೆ ಸಮಯದಲ್ಲಿ ಪೋಲಿಸ್ ರಿಗೆ ಅಪಘಾತದ ಬಗ್ಗೆ ಮಾಹಿತಿ ತಿಳಿಸಿರುತ್ತೇನೆ. ನಾನು ಠಾಣೆಗೆ ಸಂಜೆ 07.30 ರಿಂದ 08.00 ಗಂಟೆ ಸಮಯದಲ್ಲಿ ಹೋಗಿ ಮೌಖಿಕ ವಾಗಿ ಅಪಘಾತದ ಬಗ್ಗೆ ತಿಳಿಸಿರುತ್ತೇನೆ, ಪೋಲಿಸ್ ರು ದೂರು ಬರೆಸಿಕೊಂಡು ಬನ್ನಿ ಎಂದು ಹೇಳಿದ ಮೇರೆಗೆ ನಾನು ಲಿಖಿತ ದೂರನ್ನು ನೀಡಿರುತ್ತೇನೆ. ಠಾಣೆಯಿಂದ ನಾನು ದೂರು ಬರೆಸಿದ ಜಾಗಕ್ಕೆ 5-10 ನಿಮಿಷದಲ್ಲಿ ಹೋಗುವ ಅಂತರ ಇದೆ. ನಾನು ಲಿಖಿತ ದೂರನ್ನು ತೆಗೆದುಕೊಂಡು ರಾತ್ರಿ 10.00 ರಿಂದ 10.30 ಸಮಯದಲ್ಲಿ ಹೋಗಿರುತ್ತೇನೆ. ನನ್ನ ತಾಯಿ ಮೃತ ಪಟ್ಟಿರುವ ಬಗ್ಗೆ ನನಗೆ ಸಂಜೆ 05.30 ಗಂಟೆಗೆ ತಿಳಿಯಿತು. ಅಂಬ್ಯುಲೆನ್ಸ ನಲ್ಲಿ ಹೋಗುತ್ತಿದ್ದಾಗ ನನ್ನ ತಾಯಿ ಉಸಿರಾಡುತ್ತಿದ್ದರು.

ಮಹಜರ್ ಗೆ ಸಹಕರಿಸುವಂತೆ ಪೋಲಿಸ್ ರು ನನಗೆ ಯಾವುದೇ ನೋಟಿಸ್ ನೀಡಿಲ್ಲ, ಮೌಖಿಕವಾಗಿ ತಿಳಿಸಿದರು. ನಿಪಿ-3 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ, ಪೋಲಿಸ್ ರು ಬರೆದಿದ್ದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೇ ಸರಿಯಲ್ಲ, ವಿಚಾರ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಅಪಘಾತ ಸ್ಥಳ ವಾಹನ ಸಂಚಾರ ಹೆಚ್ಚಾಗಿರುವ ಸ್ಥಳ ಎಂದರೇ ಸರಿಯಲ್ಲ, ಅಪಘಾತ ಸ್ಥಳ ಹೆದ್ದಾರಿ ರಸ್ತೆ ಎಂದರೇ ಸರಿಯಲ್ಲ. ನಿಪಿ-6 ಮತ್ತು ನಿಪಿ-7 ಛಾಯಾಚಿತ್ರಗಳನ್ನು ತೋರಿಸಲಾಗಿ, ಅದರಲ್ಲಿ ಕಾಣುವ ವಾಹನಕ್ಕೆ ಯಾವುದೇ ಜಕಂ ಕಂಡುಬಂದಿಲ್ಲ ಎಂದರೇ, ವಾಹನದ ಹಿಂಭಾಗಕ್ಕೆ ಜಕಂ ಆಗಿರುತ್ತದೆ. ಸದರಿ ವಾಹನಕ್ಕೆ ಯಾವುದೇ ಜಕಂ ಆಗಿಲ್ಲ ಎಂದರೇ ಸರಿಯಲ್ಲ. ನಿಪಿ-3 ಕ್ಕೆ ಸಹಿಯನ್ನು ಠಾಣೆಯಲ್ಲಿ ಹಾಕಿರುತ್ತೇನೆ ಎಂದರೇ ಸರಿಯಲ್ಲ. ಮಹಜರ್ ನ್ನು ಬೆಳಗ್ಗೆ 11.00 ರಿಂದ 12.00 ಗಂಟೆ ಸಮಯದಲ್ಲಿ ಬೈಪಾಸ್ ರಸ್ತೆಯಲ್ಲಿ ಮಾಡಿರುತ್ತಾರೆ. ಪೋಲಿಸ್ ರು ಟೆಪ ಹಿಡಿದುಕೊಂಡು ಅಪಘಾತ ಸ್ಥಳವನ್ನು ಅಳತೆ ಮಾಡಿದರಾ ಎಂದರೇ, ಅಪಘಾತ ಸ್ಥಳವನ್ನು ಪರಿಶೀಲಿಸಿರುತ್ತಾರೆ. ಮಹಜರ್ ಸ್ಥಳದ ಬಲಗಡೆ ಲೆಔಟ್ ಇದೆ, ಎಡಭಾಗದಲ್ಲಿ ತಿಮ್ಮರಾಯಪ್ಪನವರ ಜಮೀನು ಇದೆ, ಉತ್ತರ-ದಕ್ಷಿಣಕ್ಕೆ ರಸ್ತೆ ಇದೆ. ಆರೋಪಿದ ವಾಹನದ ಬಗ್ಗೆ ಪೋಲಿಸ್ ರು ನನಗೆ ತಿಳಿಸಿದರಿಂದ

ತಿಳಿದಿದೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೇ ಸರಿಯಲ್ಲ, ನಾನೇ ಮೊದಲು ನೋಡಿರುತ್ತೇನೆ. ನಿಪಿ-4 ಮತ್ತು 5 ರಲ್ಲಿ ಕಾಣುವ ವಾಹನದಿಂದ ಅಪಘಾತ ಆಗಿಲ್ಲ ಎಂದರೇ ಸರಿಯಲ್ಲ. ಅಪಘಾತ ಸ್ಥಳದಲ್ಲಿ ಆರೋಪಿ ಇದ್ದರು. ಅವರು ಕುಳಿತುಕೊಂಡಿದ್ದರು, ಆದರೆ ಅವರು ವಾಹನ ಚಾಲನೆ ಮಾಡಿದ್ದನ್ನು ನಾನು ನೋಡಿಲ್ಲ. ಆರೋಪ ಸ್ಥಳದಲ್ಲಿ ಇರಲಿಲ್ಲ ಅವರೂ ವಾಹನ ಚಾಲನೆ ಮಾಡಿಲ್ಲ ಎಂದರೇ ಸರಿಯಲ್ಲ. ನನ್ನ ತಂದೆಗೆ 65 ವರ್ಷವಾಗಿದ್ದು, ಅವರಿಗೆ ಚಾಲನಾ ಪರವಾನಿಗೆ ಇಲ್ಲದೇ ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿದ್ದರಿಂದ ನನ್ನ ತಾಯಿ ಮೃತ ಪಟ್ಟಿದ್ದಾರೆ ಎಂದರೇ ಸರಿಯಲ್ಲ. ಪರಿಹಾರ ಹಣ ಪಡೆಯುವ ಸಲುವಾಗಿ ಪೋಲಿಸ್ ರೊಂದಿಗೆ ಸೇರಿ ನಾನು ಸುಳ್ಳು ದೂರು ನೀಡಿದ್ದೇನೆ ಎಂದರೇ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳೂ ಸುಳ್ಳು ಎಂದರೇ ಸರಿಯಲ್ಲ. ನಾನು ದೂರು ನೀಡಿಲು ಠಾಣೆಗೆ ಹೋದಾಗ 2 ವಾಹನಗಳೂ ಠಾಣೆಯ ಬಳಿ ಇತ್ತು ಎಂದರೇ ಸರಿಯಲ್ಲ, ಅಪಘಾತ ಸ್ಥಳದಲ್ಲಿ ಇತ್ತು, ಮರುದಿನ ತೆಗೆದುಕೊಂಡು ಹೋದರು.

**ಮರು ವಿಚಾರಣೆ ಇಲ್ಲ.**

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ದೇವನಹಳ್ಳಿ.